**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕೇಶವ ಪ್ರಸಾದ್ ಎಸ್ (ವಿಧಾನ ಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 61 (548) |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11-03-2025 |

*****

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಬಾಗಲಕೋಟೆ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ; ಇದ್ದರೆ ಯಾವ ಕಾಲಮಿತಿಯಲ್ಲಿ ಪ್ರಾರಂಭವಾಗುವುದು; | ಬಾಗಲಕೋಟೆ ಜಿಲ್ಲೆಯಲ್ಲಿ ಜವಳಿ ಪಾರ್ಕ್ ನಿರ್ಮಾಣ ಮಾಡುವ ಬಗ್ಗೆ 2021-22ನೇ ಸಾಲಿನ ಆಯವ್ಯಯ ಘೋಷಣೆ ಕಂಡಿಕೆ (218) ರಲ್ಲಿ **"ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಪಟ್ಟಣದಲ್ಲಿ ನೇಕಾರರ ಜೀವನೋಪಾಯ ಉತ್ತೇಜಿಸಲು ಮತ್ತು ಸ್ಥಳೀಯವಾಗಿ ಉದ್ಯೋಗಾವಕಾಶಗಳನ್ನು ನೀಡಿ ಗುಳೇ ಹೋಗುವುದನ್ನು ತಡೆಗಟ್ಟಲು ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ಜವಳಿ ಪಾರ್ಕನ್ನು ಸ್ಥಾಪಿಸುವುದು"** ಎಂದು ಘೋಷಿಸಲಾಗಿರುತ್ತದೆ.<br><br>ಅದರಂತೆ, ಗುಳೇದಗುಡ್ಡ ತಾಲ್ಲೂಕಿನ ಹಾನಾಪೂರ ಎಸ್. ಬಿ. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಮುರಡಿ ಗ್ರಾಮದ ರಿ.ಸ.ನಂ. 77ಅ ಕ್ಷೇತ್ರ ಇಲ್ಲಿ 15 ಎಕರೆ ಜಮೀನನ್ನು ಪಾರ್ಕ್ ಸ್ಥಾಪನೆಗಾಗಿ ಉಪ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಬಾಗಲಕೋಟೆ ಇವರ ಹೆಸರಿಗೆ ದಿನಾಂಕ:18.08.2022 ರಂದು ಹಸ್ತಾಂತರಿಸಲಾಗಿರುತ್ತದೆ.<br><br>ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ಜವಳಿ ಪಾರ್ಕ್ ಸ್ಥಾಪಿಸಲು Transaction Advisor ನೇಮಕಾತಿಗೆ ಟೆಂಡರ್ ಪ್ರಕ್ರಿಯೆಯಲ್ಲಿರುತ್ತದೆ. |
| (ಆ) | ರಾಜ್ಯದಲ್ಲಿ ಪ್ರಸ್ತುತ ಕಾರ್ಯ ನಿರ್ವಹಿಸುತ್ತಿರುವ ಜವಳಿ ಪಾರ್ಕ್‌ಗಳು ಎಷ್ಟು ಹಾಗೂ ಯಾವ ಜಿಲ್ಲೆ ಯಾವ ಸ್ಥಳಗಳಲ್ಲಿ ಕಾರ್ಯ ನಿರ್ವಹಿಸುತ್ತಿವೆ; (ಸಂಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ ಸರ್ಕಾರಿ ಒಡೆತನದಲ್ಲಿ 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ ಹಾಗೂ ಖಾಸಗಿ ಒಡೆತನದಲ್ಲಿ ಒಟ್ಟು 06 ಜವಳಿ ಪಾರ್ಕ್‌ಗಳಿದ್ದು, 05 ಜವಳಿ ಪಾರ್ಕ್‌ಗಳು ಕಾರ್ಯನಿರ್ವಹಿಸುತ್ತಿದ್ದು, 01 ಜವಳಿ ಪಾರ್ಕ್‌ನ್ನು ಅಭಿವೃದ್ಧಿಪಡಿಸಲಾಗುತ್ತಿದೆ. ವಿವರವನ್ನು **ಅನುಬಂಧ** ದಲ್ಲಿ ಒದಗಿಸಲಾಗಿದೆ. |
| (ಇ) | ರಾಜ್ಯದಲ್ಲಿ ಸ್ಥಗಿತಗೊಂಡಿರುವ ಜವಳಿ ಪಾರ್ಕ್‌ಗಳೆಷ್ಟು; ಸ್ಥಗಿತಗೊಂಡಿದ್ದಲ್ಲಿ ಕಾರಣಗಳೇನು; ಸದರಿ ಜವಳಿ ಪಾರ್ಕ್‌ನ್ನು ಪುನಶ್ಚೇತನಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು; (ವಿವರ ಒದಗಿಸುವುದು) | ರಾಜ್ಯದಲ್ಲಿ ಯಾವುದೇ ಪಾರ್ಕ್ ಸ್ಥಗಿತಗೊಂಡಿರುವುದಿಲ್ಲ. |

...2

| | | |
|---|---|---|
| (ಈ) | ರಾಜ್ಯದಲ್ಲಿ ಅತಿ ಹೆಚ್ಚು ಜವಳಿ ಕಾರ್ಮಿಕರು ತೇರದಾಳ ಮತ ಕ್ಷೇತ್ರದಲ್ಲಿ ನೆಲೆಸಿರುವುದರಿಂದ ಈ ತಾಲ್ಲೂಕಿನಲ್ಲಿ ಹೊಸದಾಗಿ ಜವಳಿ ಪಾರ್ಕ್ ನಿರ್ಮಾಣ ಮಾಡಲು ಸರ್ಕಾರದ ನಿಲುವೇನು? | ತೇರದಾಳ ಮತ ಕ್ಷೇತ್ರದಲ್ಲಿ ಜವಳಿ ಪಾರ್ಕ್ ನಿರ್ಮಾಣಕ್ಕೆ ಸಂಬಂಧಿಸಿದಂತೆ ಯಾವುದೇ ಪ್ರಸ್ತಾವನೆ ಸ್ವೀಕೃತವಾಗಿರುವುದಿಲ್ಲ.<br><br>ಆದಾಗ್ಯೂ, ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24 ಅನ್ವಯ ಹೊಸದಾಗಿ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸುವುದಕ್ಕೆ ಖಾಸಗಿ ಉದ್ದಿಮೆದಾರರಿಗೂ ಅವಕಾಶಕಲ್ಪಿಸಲಾಗಿದೆ. ಗ್ರೀನ್ ಫೀಲ್ಡ್ ಟೆಕ್ಸ್ ಟೈಲ್ ಪಾರ್ಕ್ ಸ್ಥಾಪಿಸಲು ಇಚ್ಛಿಸಿರುವ ಖಾಸಗಿ/ ವೈಯಕ್ತಿಕ ಉದ್ದಿಮೆದಾರರು ಅಥವಾ ಕಂಪನಿ ಕಾಯ್ದೆ 2013 ರಡಿ ಸ್ಥಾಪಿತವಾಗುವ ಯಾವುದೇ ಎಸ್.ಪಿ.ವಿ. ರವರು ಕನಿಷ್ಠ 15 ಎಕರೆ ವಿಸ್ತೀರ್ಣ ಜಮೀನು ಹೊಂದಿದ್ದು, ಪಾರ್ಕ್ ಸ್ಥಾಪನೆಗೆ ಸಾಮಾನ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗಾಗಿ ಯೋಜನಾ ವೆಚ್ಚದ ಮೇಲೆ 40% ಅಥವಾ ರೂ.40.00 ಕೋಟಿವರೆಗೆ ಸಹಾಯಧನವನ್ನು ನೂತನ ಜವಳಿ ಮತ್ತು ಸಿದ್ಧ ಉಡುಪು ನೀತಿ 2019–24 ರಡಿ ಒದಗಿಸಲಾಗುವುದು.<br><br>ಅದರಂತೆ, ವೈಯಕ್ತಿಕ ಉದ್ದಿಮೆದಾರರು/ ಎಸ್.ಪಿ.ವಿ ರವರು 15 ಎಕರೆ ಜಾಗದೊಂದಿಗೆ ಪಾರ್ಕ್ ಸ್ಥಾಪಿಸಲು ಮುಂದೆ ಬಂದಲ್ಲಿ, ಜವಳಿ ನೀತಿ ಯೋಜನೆಯ ಮಾರ್ಗಸೂಚಿಯನ್ವಯ ಕ್ರಮವಹಿಸಲಾಗುವುದು. |

ಸಂಖ್ಯೆ: **CI 29 JAKE 2025**

(ಶಿವಾನಂದ ಎಸ್. ಪಾಟೀಲ)
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು

# ಅನುಬಂಧ

## ರಾಜ್ಯ ಸರ್ಕಾರ ಒಡೆತನದ ಆಂಕರ್ ಮಾದರಿ ಪಾರ್ಕ್

| ಕ್ರ.ಸಂ. | ಜಿಲ್ಲೆ | ಪಾರ್ಕ್‌ನ ಹೆಸರು |
|---|---|---|
| 1. | ಹಾವೇರಿ | ಶಿಗ್ಗಾಂವಿ ಟೆಕ್ಸ್‌ಟೈಲ್ ಪಾರ್ಕ್ ಅಸೋಸಿಯೇಷನ್, ಹಾವೇರಿ ಜಿಲ್ಲೆಯ ಖುರ್ಸಾಪುರ ಗ್ರಾಮ. |

## ಇತರೆ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪಾರ್ಕ್‌ಗಳ ವಿವರ

| ಕ್ರ.ಸಂ. | ಜಿಲ್ಲೆ | ಪಾರ್ಕ್‌ನ ಹೆಸರು |
|---|---|---|
| 1. | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ ಇಂಟಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್ (DITP) (ಕೇಂದ್ರ ಸರ್ಕಾರದ ಅನುಮೋದಿತ SITP- Scheme for Integrated Textile Park)<br>ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯ, 2ನೇ ಹಂತ, ದೊಡ್ಡಬಳ್ಳಾಪುರ, ಬೆಂಗಳೂರು[ಗ್ರಾ] ಟೆಕ್ಸ್‌ಟೈಲ್ |
| 2. | ಚಿತ್ರದುರ್ಗ | ಮೆ\|\|ಬೈನರಿ ಅಪೇರೆಲ್ ಪಾರ್ಕ್ ಪ್ರೈ.ಲಿ.,<br>(ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18)<br>#205, ಎನ್.ಹೆಚ್.4, ಮುಖ್ಯರಸ್ತೆ, ಕೆ.ಆರ್.ಹಳ್ಳಿ, ಪೋಸ್ಟ್, ಬಗ್ಗನಾಡು, ಜೆ.ಜಿ.ಹಳ್ಳಿ, ಹಿರಿಯೂರು ತಾ\|\|, ಚಿತ್ರದುರ್ಗ ಜಿಲ್ಲೆ |
| 3. | ದಾವಣಗೆರೆ | ದಾವಣಗೆರೆ ಟೆಕ್ಸ್‌ಟೈಲ್ ಪಾರ್ಕ್ (ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ)<br>ದಾವಣಗೆರೆ ಜಿಲ್ಲೆ ದಾವಣಗೆರೆ ತಾಲ್ಲೂಕು ಕಸಬಾ ಹೋ\|\| ಕರೂರು ಗ್ರಾಮ |
| 4. | ಬೆಳಗಾವಿ | ಬೋರಗಾಂವ್ ಟೆಕ್ಸ್‌ಟೈಲ್ ಪಾರ್ಕ್ (ಕೆ.ಎಸ್.ಎಸ್.ಐ.ಡಿ.ಸಿ ಅಭಿವೃದ್ಧಿಪಡಿಸಲಾದ)<br>ಬೋರಗಾಂವ್, ಚಿಕ್ಕೋಡಿ ತಾ\|\| ಬೆಳಗಾವಿ ಜಿಲ್ಲೆ. |
| 5. | ಬಳ್ಳಾರಿ | ಬಳ್ಳಾರಿ ಟೆಕ್ಸ್‌ಟೈಲ್ ಪಾರ್ಕ್ (ಕೆ.ಐ.ಎ.ಡಿ.ಬಿ ಅಭಿವೃದ್ಧಿಪಡಿಸಲಾದ)<br>ಮುಂಡರಗಿ ಕೆ.ಐ.ಎ.ಡಿ.ಬಿ ಇಂಡಸ್ಟ್ರಿಯಲ್ ಏರಿಯ, ಬಳ್ಳಾರಿ ಜಿಲ್ಲೆ. |

## ಅಭಿವೃದ್ಧಿಪಡಿಸಲಾಗುತ್ತಿರುವ ಪಾರ್ಕ್‌ನ ವಿವರ

| ಕ್ರ.ಸಂ. | ಜಿಲ್ಲೆ | ಪಾರ್ಕ್‌ನ ಹೆಸರು |
|---|---|---|
| 1. | ಬೆಳಗಾವಿ | ಕುರಣೆ ಟೆಕ್ಸ್‌ಟೈಲ್ ಪಾರ್ಕ್ ಲಿ.,<br>(ರಾಜ್ಯ ಸರ್ಕಾರದ ಅನುಮೋದಿತ ನೂತನ ಜವಳಿ ನೀತಿ 2013-18)<br>ಬುಗಟೆ ಗ್ರಾಮ, ಹುಕ್ಕೇರಿ ತಾ\|\| ಬೆಳಗಾವಿ ಜಿಲ್ಲೆ. |

K. Jyothi 7/3/2025

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ
ನಿರ್ದೇಶಕರು, ಕೈಮಗ್ಗ ಮತ್ತು ಜವಳಿ